ಯಾವುದೇ ನಿರ್ಣಯ ಕೈಗೊಳ್ಳದೇ, ನಮಗೆ ಇನ್ನೂ ಸ್ವಲ್ಪ ಸಮಯಾವಕಾಶ ಕೊಡಿ ಎಂದು ಕೇಳಿದರೆ, ಇದರಲ್ಲಿ ಏನೂ ಅರ್ಥವಿಲ್ಲ? ಇದರಿಂದಾಗಿ ಈ ದಿಸೆಯಲ್ಲಿ ಸರ್ಕಾರದ ನಿಲುವು ಏನು ಎಂಬುದು ನಮಗೆ ಅರ್ಥವಾಗುತ್ತಿದೆ. ಇದನ್ನು ನಾವು ಪ್ರತಿಭಟಿಸುತ್ತಾ ನಮ್ಮ ಧರಣಿಯನ್ನು ಮುಂದುವರೆಸುತ್ತಿದ್ದೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತೊಮ್ಮೆ ಸದನದ ಬಾವಿಗೆ ಹಿಂತಿರುಗಿ ಧರಣಿ ನಿರತರಾದರು).

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ಅಧ್ಯಕ್ಷರೇ, ಈ ತಿಂಗಳು 30 ದಿವಸದಿಂದಲೂ ಕೂಡ ಸಿ.ಇ.ಟಿ. ಬಗ್ಗೆ ತೀರ್ಮಾನ ಮಾಡುತ್ತೇವೆ, ರಾಜ್ಯದ ಸಾಮಾನ್ಯ ಮತ್ತು ಬಡ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಡುತ್ತೇವೆ ಎಂದು ಸರ್ಕಾರ ಹೇಳುತ್ತಲೇ ಬಂದಿದೆ. ಆದರಲ್ಲಿ ಸರ್ಕಾರ ವಿಫಲವಾಗಿದೆ, ಮಾನ್ಯ ಅಧ್ಯಕ್ಷರೂ ಕೂಡ ಮಾನ್ಯ ಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದರು.- ಆದರೆ ಮಾನ್ಯ ಮಂತ್ರಿಗಳೂ ಕೂಡ ಉತ್ತರ ಕೊಟ್ಟಿಲ್ಲ. ಸರ್ಕಾರ ಸಿ.ಇ.ಟಿ. ಬಗ್ಗೆ ತನ್ನ ಸಮಂಜಸವಾದ ನಿಲುವನ್ನು ವ್ಯಕ್ತಪಡಿಸದೇ ಇರುವುದನ್ನು ಪ್ರತಿಭಟಿಸಿ ಇತರ ವಿರೋಧ ಪಕ್ಷಗಳ ಶಾಸಕರುಗಳೊಂದಿಗೆ ನಮ್ಮ ಪಕ್ಷದ ಶಾಸಕರೂ ಕೂಡ ಧರಣಿಯಲ್ಲಿ ಪಾಲ್ಗೊಳ್ಳುತ್ತೇವೆ.

(ಈ ಹಂತದಲ್ಲಿ ಜನತಾ ದಳ (ಎಸ್) ಪಕ್ಷದ ಶಾಸಕರೂ ಕೂಡ ಶ್ರೀ ಚನ್ನಿಗಪ್ಪನವರ ನೇತೃತ್ವದಲ್ಲಿ ಧರಣಿಯಲ್ಲಿ ಪಾಲ್ಗೊಳ್ಳಲು ಸದನದ ಬಾವಿಗೆ ಆಗಮಿಸಿದರು).

ಅಧ್ಯಕ್ಷರು:- ಮಾನ್ಯ ಸಂಪಂಗಿಯವರೇ, ತಾವು ಏನೋ ಒಂದು ವಿಷಯವನ್ನು ಪ್ರಸ್ತಾಪಿಸಬೇಕೆಂದಿದ್ದಿರಿ.

ವಿಷಯ:- (ಆ) ಬಾಗೇಪಲ್ಲಿ ವಿಧಾನ ಸಭೆ ಕ್ಷೇತ್ರದಲ್ಲಿನ ಆಸ್ಪತ್ರೆಗೆ ವಿದ್ಯುತ್ ಸಂಪರ್ಕ ನಿಲುಗಡೆ ಮಾಡಿರುವ ಬಗ್ಗೆ

ಶ್ರೀ ಎನ್. ಸಂಪಂಗಿ:- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಪ್ರಸ್ತಾಪಿಸುತ್ತಿಲ್ಲ. ನಮ್ಮ ಕ್ಷೇತ್ರದ ಆಸ್ಪತ್ರೆಯೊಂದರಲ್ಲಿ ಏನಾಗಿದೆ ಎಂದರೆ, ಮೊನ್ನೆ ಬಿಲ್ ಕಟ್ಟಿಲ್ಲವೆಂದು ಸಂಪರ್ಕ ಕಡಿತಗೊಳಿಸಿದ್ದರಿಂದಾಗಿ ಅಲ್ಲಿ ತೀವ್ರ ತೊಂದರೆಯಾಗಿದೆ.

(ಗೊಂದಲ)

ಅಧ್ಯಕ್ಷರು:- ತಾವು ಯಾವ ರೀತಿಯಾಗಿ ಇವತ್ತು ಸಿ.ಇ.ಟಿ. ವಿಷಯದ ಬಗ್ಗೆ ಪ್ರಸ್ತಾಪ ಮಾಡಿದಿರೋ, ಅದೇ ರೀತಿಯಲ್ಲಿ ಅವರ ಕ್ಷೇತ್ರದ ಸಮಸ್ಯೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಅವರಿಗೂ ಸಹ ಹಕ್ಕಿದೆ. This is zero hour. He has got the right. ದಯವಿಟ್ಟು ಸುಮ್ಮನಿರಿ.

(ಗೊಂದಲ)

ಅಧ್ಯಕ್ಷರು:- ನೀವು ಹೇಳಿದ್ದನ್ನು ಮಾತ್ರ ನಾವು ಕೇಳಬೇಕು. ಅವರು ಹೇಳಿದ್ದನ್ನು ಕೇಳಬಾರದೇ? ಅದಕ್ಕೆ ನಮಗೆ ಹಕ್ಕಿಲ್ಲವೇ? ಅವರು ಅವರ ಸೀಟ್‌ನಲ್ಲಿ ನಿಂತು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್:- ಹೌಸ್ ಆರ್ಡರ್ ನಲ್ಲಿದೆಯೇ?

ಅಧ್ಯಕ್ಷರು:- ಹೌಸ್ ಆರ್ಡರ್‌ನಲ್ಲಿದೆ, Shall I read the rules?